# ಕರ್ನಾಟಕ ಸರ್ಕಾರ

## (ಸಹಕಾರ ಇಲಾಖೆ)

## ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52

ಸಂಖ್ಯೆ:ಡೈರಿ/ಡಿಎಪ್ವೈ-1/33/2009-10 ದಿನಾಂಕ:12-10-2009.

## -: ಸುತ್ತೋಲೆ :-

ವಿಷಯ:- ಉತ್ತರ ಕರ್ನಾಟಕ ಭಾಗದಲ್ಲಿ ಹೊಸದಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಾ ಯಿಸುವಾಗ ಗಮನಿಸಬೇಕಾದ ಅಂಶಗಳು.

ಉಲ್ಲೇಖ:-

1. ಈ ಕಛೇರಿಯ ಸುತ್ತೋಲೆ ಸಂ:ಡಿಎವೈ/ 19/ಜೆಎಂಸಿ/82-83, 7-1983.
2. ಈ ಕಛೇರಿಯ ಸುತ್ತೋಲೆ ಸಂ:ಡಿಎವೈ/55/ಜೆಎಂಸಿ/2003-04, ದಿ:27-4-2004.
3. ದಿ:2-6-2009 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ, ಬೆಂಗಳೂರು ಇವರ ಪತ್ರ ಸಂ:ಕಹಾಮ/ಪ.ಸಂ/987/2009, ದಿ:29-6-2009.

-0-

ಕರ್ನಾಟಕ ರಾಜ್ಯದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಾಯಿಸಲು ಗಮನಿಸಬೇಕಾದ ಅಂಶಗಳನ್ನು ಉಲ್ಲೇಖ (1) ಮತ್ತು (2)ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಉಲ್ಲೇಖ (2)ರ ಸುತ್ತೋಲೆಯಲ್ಲಿ ಹೊಸದಾಗಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ನೋಂದಾಯಿಸಲು ಒಂದು ಸಂಘದಿಂದ, ಇನ್ನೊಂದು ಸಂಘಕ್ಕೆ 1 ಕಿ.ಮೀ.ದೂರದ ಅಂತರ ಹಾಗೂ ಕನಿಷ್ಠ 250 ಲೀಟರ್ ಹಾಲು ಶೇಖರಣೆ ಮಾಡುವ ಸಾಮರ್ಥ್ಯ ಹೊಂದಿದ್ದಲ್ಲಿ ಮಾತ್ರ ಸಂಘವನ್ನು ನೋಂದಾಯಿಸಬಹುದೆಂದು ಸೂಚಿಸಲಾಗಿದೆ. ಈ ಷರತ್ತು ಕರ್ನಾಟಕ ರಾಜ್ಯದ ಎಲ್ಲಾ ಪ್ರದೇಶಕ್ಕೂ ಅನ್ವಯವಾಗುತ್ತದೆ.

ಉತ್ತರ ಕರ್ನಾಟಕ ಭಾಗದ ರೈತರುಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ಹೈನುಗಾರಿಕೆ ಕಾರ್ಯಕ್ರಮಗಳನ್ನು ಜರುಗಿಸಲು ಕರ್ನಾಟಕ ಸರ್ಕಾರವು 1000 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಉತ್ತರ ಕರ್ನಾಟಕದಲ್ಲಿ ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕೆ ಸಂಬಂಧಿಸಿದಂತೆ ಹಾಲು ಉತ್ಪಾದನೆ, ಹಾಲಿನ ಬಳಕೆ ಹಾಗೂ ಹಾಲು ಮಾರಾಟಕ್ಕೆ ಲಭ್ಯವಿರುವ ಹೆಚ್ಚುವರಿ ಹಾಲಿನ ಪ್ರಮಾಣ ಕುರಿತಂತೆ ಸರ್ವೆ ನಡೆಸಿದಾಗ, ಪ್ರತಿದಿನ ಮಾರಾಟಕ್ಕೆ ಹೆಚ್ಚುವರಿಯಾಗಿ 250 ಲೀಟರ್ ಹಾಲು ಸಿಗುವಂತಹ ಹಳ್ಳಿಗಳ ಸಂಖ್ಯೆ ತೀರಾ ಕಡಿಮೆ ಇರುವುದರಿಂದ ಸಂಘಗಳನ್ನು ನಿಯಮಾನುಸಾರ ನೋಂದಣಿ ಮಾಡಲು ಸಾಧ್ಯವಾಗುತ್ತಿಲ್ಲ. ಒಂದು ಹಳ್ಳಿಯಲ್ಲಿ ಪ್ರತಿ ದಿನಕ್ಕೆ 100 ಲೀಟರ್ ಹೆಚ್ಚುವರಿ ಹಾಲಿನ ಉತ್ಪಾದನೆ ಇದ್ದಲ್ಲಿ, ಹಾಲಿನ ಸಂಘವನ್ನು ರಚಿಸಲು ಅವಕಾಶ ನೀಡಿದಲ್ಲಿ, ಹೆಚ್ಚಿನ ಸಂಖ್ಯೆಯಲ್ಲಿ ಸಂಘಗಳನ್ನು ನೋಂದಣಿ ಮಾಡಿ, ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ಈ ಭಾಗದ ಹೈನುಗಾರಿಕೆ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಸದರಿ ನಿಯಮಗಳನ್ನು ಪರಿಷ್ಕರಿಸಿ, ಸಂಘಗಳ ನಡುವಿನ ಅಂತರವನ್ನು ಈ ಹಿಂದಿನಂತೆ 2 ಕಿ.ಮೀ.ಗೆ ನಿಗದಿಪಡಿಸಿ, ಹೆಚ್ಚುವರಿಯಾಗಿ 100 ಲೀಟರ್ ಮಾರಾಟಕ್ಕೆ ಲಭ್ಯವಿರುವ ಗ್ರಾಮಗಳಲ್ಲಿ ಹಾಲು ಉತ್ಪಾದಕರ ಸಂಘವನ್ನು ನೋಂದಾಯಿಸಲು ಷರತ್ತುಗಳನ್ನು ಸಡಿಲಗೊಳಿಸುವಂತೆ, ಉಲ್ಲೇಖಿತ (4)ರಲ್ಲಿ ಪ್ರಸ್ತಾವೆ ಸ್ವೀಕೃತವಾಗಿದೆ. ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:2-6-2009 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶು ಸಂಗೋಪನೆ ಹಾಗೂ ಮೀನುಗಾರಿಕೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಲ್ಲಿ ಒಂದು ಸಂಘವನ್ನು ರಚಿಸುವುದಕ್ಕೆ ಹಾಲಿನ ಪ್ರಮಾಣದ ಕನಿಷ್ಠ ಮಿತಿಯನ್ನು 250 ಲೀಟರ್‌ಗೆ ಬದಲಾಗಿ 100 ಲೀಟರ್‌ಗೆ ನಿಗದಿಪಡಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ.

ಅದರಂತೆ, ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಉತ್ತರ ಕರ್ನಾಟಕದಲ್ಲಿ ಹೊಸದಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಾಯಿಸಲು, ಒಂದು ಸಂಘದಿಂದ ಇನ್ನೊಂದು ಸಂಘಕ್ಕೆ 2 ಕಿ.ಮೀ.ಅಂತರ ಹಾಗೂ ಕನಿಷ್ಠ 100 ಲೀಟರ್ ಹಾಲನ್ನು ಶೇಖರಣೆ ಮಾಡುವ ಸಾಮರ್ಥ್ಯ ಹೊಂದಿದಲ್ಲಿ, ಸಂಘವನ್ನು ನೋಂದಾಯಿಸಬಹುದಾಗಿದೆ ಎಂದು ಸೂಚಿಸಲಾಗಿದೆ.

ಸುತ್ತೋಲೆಯ ಉಳಿದ ಅಂಶಗಳು ಯಥಾ ಪ್ರಕಾರ ಮುಂದುವರೆಯುವುದು.

(ಕಛೇರಿ ಟಿಪ್ಪಣಿಯು ಸಹಕಾರ ಸಂಘಗಳ ನಿಬಂಧಕರಿಂದ ಅನುಮೋದಿಸಲ್ಪಟ್ಟಿದೆ)

(ಆರ್.ಎಸ್.ನೂಲಿ)
ಸಹಕಾರ ಸಂಘಗಳ ಅಪರ ನಿಬಂಧಕರು,
(ಕೈಗಾರಿಕೆ ಮತ್ತು ಹೈನುಗಾರಿಕೆ).

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.**

**ಸಂಖ್ಯೆ:ಆರ್‌ಸಿಎಸ್/80/ತಾಂ.ಅ/2007-08** **ದಿನಾಂಕ: 29-9-2007**

**:: ಸುತ್ತೋಲೆ ಸಂಖ್ಯೆ 201 ::**

**ವಿಷಯ:** ಸಹಕಾರ ಸಂಘಗಳ ಕಟ್ಟಡ ನಿರ್ಮಾಣ, ನಿರ್ವಹಣೆ, ಕಟ್ಟಡ/ನಿವೇಶನ ಖರೀದಿ ಬಗ್ಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮತಿ ನೀಡುವ ಬಗ್ಗೆ ಮಾರ್ಗಸೂಚಿಗಳು.

**ಉಲ್ಲೇಖ:**
1) ಈ ಕಛೇರಿಯ ದಿ:17-10-1997 ಸುತ್ತೋಲೆ ಕ್ರ.104/ಜಿಡಿಈ/65/ಜಿಈಟಿ/97-98.
2) ಈ ಕಛೇರಿಯ ದಿ:11-6-2004 ರ ಸುತ್ತೋಲೆ ಕ್ರ.ಓಟಿಎಸ್/256/ಹೆಚ್‌ಓಟಿ/2003-04.

=======

ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯನ್ವಯ ನೋಂದಣಿಯಾಗಿರುವ ವಿವಿಧ ಮಾದರಿಯ ಸಹಕಾರ ಸಂಘಗಳು / ಬ್ಯಾಂಕುಗಳು / ಸಂಸ್ಥೆಗಳು ಸ್ವಂತ ಕಟ್ಟಡ / ನಿವೇಶನ ಹೊಂದಲು, ನಿವೇಶನ / ಕಟ್ಟಡ ಖರೀದಿ, ಕಟ್ಟಡ ವಿಸ್ತರಣೆ, ನಿವೇಶನ / ಕಟ್ಟಡ ನಿರ್ವಹಣೆ, ಕಾಂಪೌಂಡ್ ಕಟ್ಟಲು, ದುರಸ್ತಿ ಇತ್ಯಾದಿ ಕಾಮಗಾರಿಗಳಿಗೆ ಆಡಳಿತಾತ್ಮಕ / ತಾಂತ್ರಿಕ ಅನುಮತಿ ನೀಡಲು ಮಾರ್ಗಸೂಚಿಗಳನ್ನು ಮತ್ತು ಇಲಾಖೆಯ ವಿವಿಧ ಹಂತದ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ಉಲ್ಲೇಖಿತ ಸುತ್ತೋಲೆಗಳಲ್ಲಿ ಮಾಡಲಾಗಿದೆ.

ಪ್ರಸ್ತುತ ಕಟ್ಟಡ ನಿರ್ಮಾಣದ ವೆಚ್ಚ ಅಧಿಕವಾಗುತ್ತಿರುವ ಹಿನ್ನೆಲೆಯಲ್ಲಿ ಇಲಾಖಾಧಿಕಾರಿಗಳಿಗೆ ಆಡಳಿತಾತ್ಮಕ ಅನುಮತಿ ನೀಡಲು, ನೀಡಿರುವ ಅಧಿಕಾರವನ್ನು ಪುನರ್ ವಿಮರ್ಶಿಸಲಾಗಿದೆ ಹಾಗೂ ಇಂತಹ ಅನುಮತಿ ನೀಡಲು ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಲಾಗಿದೆ.

**1) ತಾಂತ್ರಿಕ ಅನುಮತಿ:–**

ಉದ್ದೇಶಿತ ಕಟ್ಟಡ ಕಾಮಗಾರಿಯ ಅಂದಾಜು ವೆಚ್ಚದ ಪಟ್ಟಿ ಮತ್ತು ನಕ್ಷೆಯನ್ನು ಸಂಸ್ಥೆಯ ಕಾರ್ಯವ್ಯಾಪ್ತಿಯ ಲೋಕೋಪಯೋಗಿ / ಪಂಚಾಯತ್‌ರಾಜ್ / ನಗರಸಭೆ / ಮುನಿಸಿಪಾಲಿಟಿ ಇಂಜಿನಿಯರಿಂಗ್ ವಿಭಾಗದ ಅಭಿಯಂತರರಿಂದ ತಾಂತ್ರಿಕವಾಗಿ ಪರಿಶೀಲಿಸಿ ದೃಢೀಕರಿಸಲ್ಪಟ್ಟಿರುವುದನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ ಚಾಲ್ತಿ ವರ್ಷದ ಲೋಕೋಪಯೋಗಿ ಇಲಾಖೆಯ ಎಸ್.ಆರ್ ದರಗಳಿಗನುಗುಣವಾಗಿರಬೇಕು. ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಮೊದಲು ಸ್ಥಳೀಯ ಸಕ್ರಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ಮಂಜೂರಾತಿ ಪಡೆಯಬೇಕು. ಕಟ್ಟಡ ಖರೀದಿಸುವಾಗ ಇದರ ಜೊತೆಗೆ ಆಸ್ತಿ ಮೌಲ್ಯಮಾಪನವನ್ನು ಕಾರ್ಯವ್ಯಾಪ್ತಿಯ ಲೋಕೋಪಯೋಗಿ / ಪಂಚಾಯತ್‌ರಾಜ್ / ನಗರಸಭೆ / ಮುನಿಸಿಪಾಲಿಟಿ ಅಭಿಯಂತರರಿಂದ ಪಡೆಯಬೇಕು.

**2. ಆಡಳಿತಾತ್ಮಕ ಅನುಮತಿ:–**

ಕ್ರಮಾಂಕ (1)ರಲ್ಲಿ ನಮೂದಿಸಿರುವ ವಿವರಗಳು ಮತ್ತು ಸಂಬಂಧಿಸಿದ ದಾಖಲೆಗಳ ಜೊತೆಗೆ ಕೆಳಕಂಡ ಅಂಶಗಳನ್ನು ಆಡಳಿತಾತ್ಮಕ ಮಂಜೂರಾತಿ ನೀಡುವಾಗ ಪರಿಶೀಲಿಸಿ, ಪರಿಗಣಿಸತಕ್ಕದ್ದು.

1) ಕಟ್ಟಡ ನಿರ್ಮಾಣದ ಉದ್ದೇಶ ಹಾಗೂ ಇದು ಸಂಘದ ಕಾರ್ಯೋದ್ದೇಶಗಳಿಗೆ ಪೂರಕವಾಗಿರುವ ಬಗ್ಗೆ.
2) ಉದ್ದೇಶಿತ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಲು ಸಾಕಷ್ಟು ಸಂಪನ್ಮೂಲದ ಲಭ್ಯತೆ ಇರುವುದನ್ನು ಖಚಿತಪಡಿಸಭೆಕು ಹಾಗೂ ಯಾವುದೇ ಹೆಚ್ಚುವರಿ ವೆಚ್ಚ ಮಾಡತಕ್ಕದ್ದಲ್ಲ.
3) ತಾಂತ್ರಿಕ ತಜ್ಞರನ್ನು ಸಂಘವೇ ನೇಮಿಸಿಕೊಳ್ಳಬೇಕು ಅವರಿಗೆ ಕೊಡತಕ್ಕ ಸಂಭಾವನೆಯ ಶುಲ್ಕವನ್ನು ಸಂಘದ ಹಿತಕ್ಕೆ ಪೂರಕವಾಗಿರುವಂತೆ ನಿಗಧಿಪಡಿಸಿಕೊಳ್ಳಬೇಕು.
4) ಸಕ್ಷಮ ಪ್ರಾಧಿಕಾರವು ಆಡಳಿತಾತ್ಮಕ ಮಂಜೂರಾತಿ ನೀಡಬೇಕು.

**3. ಆಡಳಿತಾತ್ಮಕ ಅನುಮೋದನೆ ಸಕ್ಷಮ ಪ್ರಾಧಿಕಾರ:–**

1) ಕ್ರೋಢೀಕೃತ ನಷ್ಟ ಇಲ್ಲದಂತಹ ಸಹಕಾರ ಸಂಸ್ಥೆಗಳು ಸ್ವಂತ ಕಟ್ಟಡ ನಿಧಿ ಹೊಂದಿದ್ದು, ಹಾಗೂ ಸದಸ್ಯರಿಂದ ಈ ಕುರಿತು ಪಡೆದ ವಂತಿಕೆಯಿಂದ ಕೈಗೊಳ್ಳುವ ಕಟ್ಟಡ ನಿರ್ಮಾಣ / ಖರೀದಿ, ಕಟ್ಟಡ ವಿಸ್ತರಣೆ / ಕಟ್ಟಡ ನಿರ್ವಹಣೆ, ಕಾಂಪೌಂಡ್ ನಿರ್ಮಾಣ, ನಿವೇಶನ ಖರೀದಿ, ದುರಸ್ತಿ ಇತ್ಯಾದಿ ಪ್ರಕರಣಗಳ್ಲಿ ಇಲಾಖೆಯ ಆಡಳಿತಾತ್ಮಕ ಅನುಮತಿ ಅಗತ್ಯವಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಆಡಳಿತ ಮಂಡಳಿ ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳುವುದು ಅಂದರೆ ಇಂತಹ ಪ್ರಕರಣಗಳಲ್ಲಿ ಆಡಳಿತ ಮಂಡಳಿಗೆ ಆಡಳಿತಾತ್ಮಕ ಅನುಮತಿ ಕೊಡಲು ಅಧಿಕಾರವಿರುತ್ತದೆ.
2) ಆಪದ್ಧನ ನಿಧಿಯಿಂದ ಹಾಗೂ ಇತರೆ ಸಂಬಂಧಿಸಿದ ನಿಧಿಗಳಿಂದ ಲಾಭಾಂಶವನ್ನು ಮಹಾಸಭೆಯಲ್ಲಿ ಕಟ್ಟಡ ನಿಧಿಗೆ ವರ್ಗಾಯಿಸಿ ಕಟ್ಟಡ ನಿರ್ಮಾಣ ಕೈಗೊಳ್ಳುವಂತಹ ಪ್ರಕರಣಗಳಲ್ಲಿ ಇಲಾಖಾ ಪೂರ್ವಾನುಮತಿ ಪಡೆಯತಕ್ಕದ್ದು.

ಆಡಳಿತಾತ್ಮಕ ಅನುಮತಿ ನೀಡುವ ಇಲಾಖಾಧಿಕಾರಿಗಳವರ ಅಧಿಕಾರದ ವರ್ಗೀಕರಣವನ್ನು ಲಗತ್ತಿಸಲಾಗಿದೆ.

**4) ಟೆಂಡರುಗಳನ್ನು ಮತ್ತು ಕಾಮಗಾರಿಯನ್ನು ವಹಿಸುವಿಕೆ:–**

ಆಡಳಿತಾತ್ಮಕ ಅನುಮತಿ ಪಡೆದ ನಂತರ ಪ್ರಸ್ತಾವೆಯನ್ನು ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ನಂತರ ಮುಂದಿನ ಕ್ರಮ ಕೈಗೊಳ್ಳಬೇಕು.

ಪಾರದರ್ಶಕ ಕಾಯಿದೆಯನ್ನು ಅನುಸರಿಸಿ, ಲೋಕೋಪಯೋಗಿ ಇಲಾಖೆಯ ಕಾರ್ಯವಿಧಾನದಂತೆ ಕಾಮಗಾರಿಯನ್ನು ವಹಿಸಿಕೊಡಬೇಕು, ಅಂದಾಜು ವೆಚ್ಚ ರೂ. 5.00 ಲಕ್ಷದವರೆಗೆ ಇದ್ದಲ್ಲಿ ಟೆಂಡರುಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಅನುಮೋದಿಸಲ್ಪಟ್ಟ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಹಾಗೂ ಅಂದಾಜು ವೆಚ್ಚ ರೂ. 5.00 ಲಕ್ಷಕ್ಕೆ ಮೇಲ್ಪಟ್ಟಿದ್ದಲ್ಲಿ ಟೆಂಡರ್‌ಗಳನ್ನು ರಾಜ್ಯಮಟ್ಟದ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸಿದ ನಂತರ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬೇಕು.

ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸಿದಾಗ ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಟೆಂಡರ್ ಪ್ರೀಮಿಯಮ್ ಶೇ:10 ಕ್ಕಿಂತ ಹೆಚ್ಚಿಗೆ ಆದಲ್ಲಿ, ಸದರಿ ಕಾಮಗಾರಿಗೆ ಅಂದಾಜು ಪಟ್ಟಿಗೆ ತಾಂತ್ರಿಕ ಪರಿಶೀಲನೆ ನಡೆಸಿ ದೃಢೀಕರಿಸಿದ ಪ್ರಾಧಿಕಾರದ ಅಭಿಯಂತರರ ಒಪ್ಪಿಗೆಗೆ ಸಲ್ಲಿಸಬೇಕು.

ಪ್ರತಿಯೊಂದು ಕಾಮಗಾರಿಯು ಪೂರ್ಣಗೊಂಡ ನಂತರ ದೃಢೀಕರಣ ಪತ್ರವನ್ನು ಸಂಬಂಧಿಸಿದ ತಾಂತ್ರಿಕ ತಜ್ಞರಿಂದ ಪಡೆದು ಸಂಬಂಧಿಸಿದ ದೃಢೀಕೃತ ಅಳತೆ ಪುಸ್ತಕಗಳ ಹಾಗೂ ಅಂತಿಮ ಬಿಲ್ಲುಗಳ ಪತ್ರಿಗಳೊಂದಿಗೆ ಆಡಳಿತಾತ್ಮಕ ಅನುಮತಿ ನೀಡಿದ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಮೂಲ ದಾಖಲೆಗಳನ್ನು ಸಂಘದಲ್ಲಿಯೇ ನಿರ್ವಹಿಸಬೇಕು.

**5 ನಿರ್ಬಂಧ:_**

ಸಹಕಾರ ಸಂಸ್ಥೆಗಳು ದುಡಿಯುವ ಬಂಡವಾಳವನ್ನು ಉಪಯೋಗಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಬಾರದು.

ಈ ಸುತ್ತೋಲೆ ನಿರ್ದೇಶನಗಳನ್ನು ಸಂಬಂಧಿಸಿದ ಸಹಕಾರ ಸಂಸ್ಥೆಗಳು ಹಾಗೂ ಎಲ್ಲಾ ಇಲಾಖಾಧಿಕಾರಿಗಳು ತಪ್ಪದೇ ಅನುಸರಿಸತಕ್ಕದ್ದು.

**ಸಹಕಾರ ಸಂಘಗಳ ನಿಬಂಧಕರು,**
**ಕರ್ನಾಟಕ ರಾಜ್ಯ, ಬೆಂಗಳೂರು.**

**ಸಹಕಾರ ಸಂಘಗಳಲ್ಲಿ ಕಟ್ಟಡ ನಿರ್ಮಾಣ, ಕಟ್ಟಡ ನಿವೇಶನ ಖರೀದಿಗೆ ಆಡಳಿತಾತ್ಮಕ ಅನುಮತಿ ನೀಡುವ ಅಧಿಕಾರಿಗಳ ವರ್ಗೀಕರಣ**

| ಕ್ರ.ಸಂ | ಅಧಿಕಾರಿಗಳ ಪದನಾಮ | ಯಾವ ತರಹದ ಸಹಕಾರ ಸಂಘಗಳು | ಕಟ್ಟಡ ಕಟ್ಟಲು ಮತ್ತು ವಿಸ್ತರಣೆ ಅನುಮತಿ | ನಿವೇಶನ ಕೊಳ್ಳಲು ಅನುಮತಿ | ಕಟ್ಟಿದ ಕಟ್ಟಡಕೊಳ್ಳುವ ಬಗ್ಗೆ | ನಿವೇಶನ ಕಟ್ಟಡ ಹದ್ದು ಬಸ್ತಿಯಲ್ಲಿಡಲು ಕಾಂಪೌಂಡ್ ಕಟ್ಟಲು ಮತ್ತು ವಾರ್ಷಿಕ ರಿಪೇರಿ ಇತ್ಯಾದಿಗಳಿಗೆ |
|---|---|---|---|---|---|---|
| 1 | ಸಹಕಾರ ಸಂಘಗಳ ಸಹಾಯಕ ನಿಬಂಧಕರು | ತಾವು ನೊಂದಣಿ ಮಾಡಲು ಅಧಿಕಾರ ಹೊಂದಿದ ಸಹಕಾರ ಸಂಘಗಳಿಗೆ ಸೀಮಿತವಾದಂತೆ. | ರೂ.7.50 ಲಕ್ಷದವರೆಗೆ | ರೂ.5.00 ಲಕ್ಷದವರೆಗೆ | ರೂ.7.50 ಲಕ್ಷದವರೆಗೆ | ರೂ.1.00 ಲಕ್ಷದವರೆಗೆ |
| 2 | ಸಹಕಾರ ಸಂಘಗಳ ಉಪ ನಿಬಂಧಕರು | 1) ತಾವು ನೊಂದಣಿ ಮಾಡಿದ ಸಹಕಾರ ಸಂಘಗಳಿಗೆ ಸೀಮಿತವಾದಂತೆ. | ರೂ.20.00 ಲಕ್ಷದವರೆಗೆ | ರೂ.15.00 ಲಕ್ಷದವರೆಗೆ | ರೂ.20.00 ಲಕ್ಷದವರೆಗೆ | ರೂ.3.00 ಲಕ್ಷದವರೆಗೆ |
| | | 2) ಸಹಾಯಕ ನಿಬಂಧಕರು, ನೊಂದಣಿ ಮಾಡಿದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ. | ರೂ.7.50 ಲಕ್ಷ ಮೀರಿ ರೂ. 20.00 ಲಕ್ಷದವರೆಗೆ | ರೂ.5.00 ಲಕ್ಷ ಮೀರಿ ರೂ. 15.00 ಲಕ್ಷದವರೆಗೆ | ರೂ.7.50 ಲಕ್ಷ ಮೀರಿ ರೂ. 20.00 ಲಕ್ಷದವರೆಗೆ | ರೂ.1.00 ಲಕ್ಷ ಮೀರಿ ರೂ. 3.00 ಲಕ್ಷದವರೆಗೆ |

| | | | | | | |
|---|---|---|---|---|---|---|
| 3 | ಸಹಕಾರ ಸಂಘಗಳ ಜಂಟಿ ನಿಬಂಧಕರು | 1) ತಾಲ್ಲೂಕಿಗಿಂತ ಹೆಚ್ಚಿಗೆ ವ್ಯಾಪ್ತಿಯುಳ್ಳ ಹಾಗೂ ವಿಭಾಗೀಯ ಮಟ್ಟದವರೆಗಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ. | ರೂ.50.00 ಲಕ್ಷದವರೆಗೆ | ರೂ.30.00 ಲಕ್ಷದವರೆಗೆ | ರೂ.50.00 ಲಕ್ಷದವರೆಗೆ | ರೂ.5.00 ಲಕ್ಷದವರೆಗೆ |
| | | 2) ಸಹಾಯಕ ನಿಬಂಧಕರು, ಉಪ ನಿಬಂಧಕರು ನೊಂದಣಿ ಮಾಡಿದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ. | ರೂ.20.00 ಲಕ್ಷ ಮೀರಿ ರೂ. 50.00 ಲಕ್ಷದವರೆಗೆ | ರೂ.15.00 ಲಕ್ಷ ಮೀರಿ ರೂ. 30.00 ಲಕ್ಷದವರೆಗೆ | ರೂ.20.00 ಲಕ್ಷ ಮೀರಿ ರೂ. 50.00 ಲಕ್ಷದವರೆಗೆ | ರೂ.3.00 ಲಕ್ಷ ಮೀರಿ ರೂ. 5.00 ಲಕ್ಷದವರೆಗೆ |

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ:1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52**

ಸಂ: ಡಿಎವೈ-1 : ಜೆಎಂಸಿ : 03 : 2007-08 ದಿನಾಂಕ: 12-4-2007

**ಸು ತ್ತೋ ಲೆ**

| | |
|---|---|
| ವಿಷಯ: | ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಾಯಿಸುವಾಗ ಗಮನದಲ್ಲಿಡಬೇಕಾದ ಅಂಶಗಳು. |
| ಉಲ್ಲೇಖ: | ಈ ಕಛೇರಿಯ ಸುತ್ತೋಲೆ ಸಂ: ಡಿಎವೈ.19.ಜೆಎಂಸಿ.83-84 ದಿ:14-7-1983 ಹಾಗೂ ಡಿಎವೈ.55.ಜೆಎಂಸಿ.2003-04, ದಿ: 27-04-04. |

******

ಕರ್ನಾಟಕ ರಾಜ್ಯದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಗ್ರಾಮದ ಹೆಸರಿನಲ್ಲಿ ಪ್ರಾರಂಭದಿಂದಲೂ ನೋಂದಾಯಿಸಲಾಗಿದೆ. ಆದರೆ ಇತ್ತೀಚೆಗೆ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ವ್ಯಕ್ತಿಗಳ ಹೆಸರಿನಲ್ಲಿ ನೋಂದಾಯಿಸುವಂತೆ ಕೋರಿ ಪ್ರಸ್ತಾವೆಗಳು ಬರುತ್ತಿರುವುದು ಕಂಡು ಬರುತ್ತಿವೆ. ಈ ರೀತಿ ವ್ಯಕ್ತಿಗಳ ಹೆಸರಿನಲ್ಲಿ ಸಹಕಾರ ಸಂಘಗಳನ್ನು ನೋಂದಾಯಿಸಿದರೆ ಹೊಸದಾಗಿ ಸಹಕಾರ ಸಂಘಗಳನ್ನು ಬೇರೆ ಬೇರೆ ವ್ಯಕ್ತಿಗಳ ಹೆಸರಿನಲ್ಲಿ ನೋಂದಾಯಿಸಲು ಪ್ರಸ್ತಾವೆಗಳು / ತಿದ್ದುಪಡಿ ಮಾಡಲು ಪ್ರಸ್ತಾವೆಗಳು ಬರುವ ಸಾಧ್ಯತೆ ಇರುತ್ತದೆ. ಆದುದರಿಂದ ವ್ಯಕ್ತಿಗಳ ಹೆಸರಿನಲ್ಲಿ ಸಹಕಾರ ಸಂಘಗಳನ್ನು ನೋಂದಾಯಿಸುವ ಬದಲು ಆಯಾ ಗ್ರಾಮದ ಹೆಸರಿನಲ್ಲಿ ಸಹಕಾರ ಸಂಘಗಳನ್ನು ರಚಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಣಿ ಮಾಡುವಾಗ ಆಯಾ ಗ್ರಾಮದ ಹೆಸರಿನಲ್ಲಿ ಪ್ರಸ್ತಾವೆ ಸಲ್ಲಿಸಿದಲ್ಲಿ ಮಾತ್ರ ಸಂಘವನ್ನು ನೋಂದಣಿ ಮಾಡಲು ಸೂಚಿಸಲಾಗಿದೆ.

ಉಳಿದಂತೆ ಉಲ್ಲೇಖಿತ ಸುತ್ತೋಲೆಗಳಲ್ಲಿನ ಅಂಶಗಳು ಮುಂದುವರೆಯುತ್ತವೆ.

ಸಹಿ,
(ಎಂ. ವೆಂಕಟರೆಡ್ಡಿ)
ಸಹಕಾರ ಸಂಘಗಳ ಅಪರ ನಿಬಂಧಕರು,
(ಕೈಗಾರಿಕೆ ಮತ್ತು ಇತರೆ)

**ಸಹಕಾರ ಸಂಘಗಳ ಪ್ರಸ್ತಾವಗಳಿಗೆ ಆಡಳಿತಾತ್ಮಕ ಅನುಮತಿ**

**ಸುತ್ತೋಲೆ**

**ಸಂಖ್ಯೆ : ಸಿಎಂಡಬ್ಲ್ಯು 182 ಸಿಎಲ್‌ಎಂ 2004**

**ಬೆಂಗಳೂರು, ದಿನಾಂಕ 8 ನೇ ಡಿಸೆಂಬರ್, 2004**

**ಕರ್ನಾಟಕ ರಾಜ್ಯಪತ್ರ ವಿಶೇಷ ಪತ್ರಿಕೆ ಸಂಖ್ಯೆ 1396, ದಿನಾಂಕ: 13-12-2004**

**ವಿಷಯ:** ಸಹಕಾರ ಸಂಘಗಳ ಪ್ರಸ್ತಾವಗಳಿಗೆ ಆಡಳಿತಾತ್ಮಕ ಅನುಮತಿ ನೀಡುವ ಬಗ್ಗೆ.

ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಮತ್ತು ಸಹಕಾರ ಇಲಾಖೆಯು ಕಾಲಕಾಲಕ್ಕೆ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳ ಪ್ರಕಾರ, ಸಹಕಾರ ಸಂಘ ಸಂಸ್ಥೆಗಳು ತಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ವ್ಯವಹರಿಸಲು ಸಹಕಾರ ಇಲಾಖೆಯಿಂದ ಆಡಳಿತಾತ್ಮಕ ಅನುಮತಿ ಮತ್ತು ಮಂಜೂರಾತಿ ಪಡೆಯುತ್ತಿರುವುದು ಸರಿಯಷ್ಟೆ. ಸಹಕಾರ ಸಂಘಗಳ ನಿಬಂಧಕರು ಹಲವಾರು ಸುತ್ತೋಲೆಗಳನ್ನು ಹೊರಡಿಸಿ ಸಂಬಂಧಪಟ್ಟ ವಿಷಯಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ, ಪ್ರಾಂತಮಟ್ಟದ ಅಧಿಕಾರಿಗಳಿಂದ ಮತ್ತು ಸಹಕಾರ ಸಂಘಗಳ ನಿಬಂಧಕರಿಂದ ಅನುಮತಿ ಅಥವಾ ಮಂಜೂರಾತಿ ಪಡೆಯಬೇಕೆಂದು ಸೂಚಿಸಿರುತ್ತಾರೆ. ಆದರೂ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದ ಪ್ರಸ್ತಾವಗಳು ಸರ್ಕಾರದ ಅನುಮೋದನೆಗೆ ಬರುತ್ತಿವೆ. ಸಹಕಾರ ಸಂಸ್ಥೆಗಳು ಸಲ್ಲಿಸುವ ಪ್ರಸ್ತಾವಗಳನ್ನು ವಿಳಂಬವಿಲ್ಲದೆ ಶೀಘ್ರವಾಗಿ ಪರಿಗಣಿಸಿ ಅಗತ್ಯ ಅನುಮತಿ / ಮಂಜೂರಾತಿ ಕೊಡುವ ಹಿತದೃಷ್ಟಿಯಿಂದ ಈ ಕೆಳಕಂಡಂತೆ ಸೂಚನೆಗಳನ್ನು ನೀಡಿದೆ.

1. **ಆಡಳಿತ ಸಮಿತಿಯ ಸದಸ್ಯರ ಪ್ರವಾಸದ ಅನುಮತಿ :**

   (ಅ) ಯಾವುದೇ ಸಹಕಾರ ಸಂಸ್ಥೆಯ ಆಡಳಿತ ಸಮಿತಿಯ ಸದಸ್ಯರು ರಾಜ್ಯದ ಒಳಗೆ ಅಥವಾ ರಾಜ್ಯದ ಹೊರಗೆ ಅಧ್ಯಯನ ಪ್ರವಾಸ ಕೈಗೊಳ್ಳಬೇಕಾದಲ್ಲಿ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆಯತಕ್ಕದ್ದು. ಆದರೆ ರಾಜ್ಯದ ಹೊರಗಿನ ಪ್ರವಾಸದ ಅವಧಿಯು 10 ದಿನಗಳಿಗಿಂತ ಹೆಚ್ಚಿದ್ದಲ್ಲಿ ಮಾತ್ರ ಸರ್ಕಾರದ ಪೂರ್ವಾನುಮತಿ ಪಡೆಯತಕ್ಕದ್ದು.

(ಆ) ಯಾವುದೇ ಸಹಕಾರ ಸಂಸ್ಥೆಯ ಆಡಳಿತ ಸಮಿತಿಯ ಸದಸ್ಯರು ವಿದೇಶ ಪ್ರವಾಸ ಕೈಗೊಳ್ಳಬೇಕಾದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆಯತಕ್ಕದ್ದು. ಆದರೆ ಈ ಬಗ್ಗೆ ಯಾವುದೇ ಕಾರಣಕ್ಕೂ ಘಟನೋತ್ತರ ಅನುಮತಿಯನ್ನು ನೀಡಲಾಗುವುದಿಲ್ಲ.

**2. ಹೊಸ ವಾಹನಗಳ ಖರೀದಿ ಮತ್ತು ಹಳೇ ವಾಹನಗಳ ವಿಲೇವಾರಿ ಅನುಮತಿ :**

ಹೊಸ ವಾಹನಗಳ ಖರೀದಿ ಮತ್ತು ಹಳೇ ವಾಹನಗಳ ವಿಲೇವಾರಿ ಬಗ್ಗೆ ಸಹಕಾರ ಸಂಘಗಳ ನಿಬಂಧಕರೇ ಸರ್ಕಾರದಲ್ಲಿ ಪ್ರಚಲಿತವಿರುವ ವಾಹನ ಖರೀದಿ ಮತ್ತು ವಿಲೇವಾರಿ ನಿಯಮಗಳನ್ನು ಆಧರಿಸಿ ಅನುಮತಿ ನೀಡತಕ್ಕದ್ದು.

**3. ಚರಾಸ್ತಿ/ಸ್ಥಿರಾಸ್ತಿ/ನಿವೇಶನ/ಜಮೀನು/ಕಟ್ಟಡ ಮತ್ತು ಯಂತ್ರೋಪಕರಣ ಖರೀದಿ ಮತ್ತು ವಿಲೇವಾರಿ ಅನುಮತಿ:**

(ಅ) ಸ್ವಂತ ಬಂಡವಾಳದಿಂದ ಚರಾಸ್ತಿ, ಸ್ಥಿರಾಸ್ತಿ, ನಿವೇಶನ, ಜಮೀನು, ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಕೊಂಡುಕೊಳ್ಳುವುದಾದಲ್ಲಿ ಅಥವಾ ಮಾರಾಟ ಮಾಡುವುದಾದಲ್ಲಿ ಸಹಕಾರ ಸಂಘಗಳ ನಿಬಂಧಕರೇ ಅನುಮತಿ ನೀಡತಕ್ಕದ್ದು.

(ಆ) ಸರ್ಕಾರದ ಸಾಲ, ಅನುದಾನ ಅಥವಾ ಗ್ಯಾರಂಟಿ ಮೂಲಕ ಚರಾಸ್ತಿ, ಸ್ಥಿರಾಸ್ತಿ, ನಿವೇಶನ, ಜಮೀನು, ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಕೊಂಡಿದ್ದು ಸದರಿ ಹಣ ತೀರುವಳಿ ಆಗಿದ್ದಲ್ಲಿ ಅವುಗಳ ವಿಲೇವಾರಿಗೆ ಸಹಕಾರ ಸಂಘಗಳ ನಿಬಂಧಕರೇ ಅನುಮತಿ ನೀಡತಕ್ಕದ್ದು.

(ಇ) ಸರ್ಕಾರದ ಸಾಲ, ಅನುದಾನ ಅಥವಾ ಗ್ಯಾರಂಟಿ ಮೂಲಕ ಚರಾಸ್ತಿ, ಸ್ಥಿರಾಸ್ತಿ, ನಿವೇಶನ, ಜಮೀನು, ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಕೊಂಡಿದ್ದು ಸರ್ಕಾರದ ಸಾಲ, ಅನುದಾನ ಅಥವಾ ಗ್ಯಾರಂಟಿ ಬಾಕಿ ಉಳಿದಿದ್ದಲ್ಲಿ ಮಾತ್ರ ಇವುಗಳ ವಿಲೇವಾರಿಗೆ ಸರ್ಕಾರದ ಪೂರ್ವಾನುಮತಿ ಪಡೆಯತಕ್ಕದ್ದು.

**4. ರಜತ/ಸ್ವರ್ಣ/ವಜ್ರ/ಪ್ಲಾಟಿನಂ ಶತಮಾನೋತ್ಸವದ ಆಚರಿಸುವ ಅನುಮತಿ**

(ಅ) ಸಹಕಾರ ಸಂಸ್ಥೆಗಳ ಆರ್ಥಿಕ ಸ್ಥಿತಿ ಮತ್ತು ಪ್ರತಿ ಪ್ರಕರಣದ ಅರ್ಹತೆಯನ್ನು ಪರಿಗಣಿಸಿ ಸಹಕಾರ ಸಂಘಗಳ ನಿಬಂಧಕರೇ ಅನುಮತಿ ನೀಡತಕ್ಕದ್ದು. ಆದರೆ ದುಡಿಯುವ ಬಂಡವಾಳದಿಂದ ವೆಚ್ಚ ಮಾಡಲು ಅನುಮತಿ ನೀಡತಕ್ಕದ್ದು.

(ಆ) ಲಾಭದಿಂದ ಸದರಿ ಉದ್ದೇಶಕ್ಕಾಗಿ ನಿಧಿ ಮತ್ತು ಸ್ಮರಣ ಸಂಚಿಕೆಯಲ್ಲಿನ ಜಾಹೀರಾತು / ದೇಣಿಗೆಯಿಂದ ಬಂದ ನಿಧಿಯಿಂದ ಮಾತ್ರ ವೆಚ್ಚ ಮಾಡಲು ಅನುಮತಿ ನೀಡತಕ್ಕದ್ದು.

ಈಗಾಗಲೇ ಸಹಕಾರ ಸಂಘಗಳ ನಿಬಂಧಕರು ಹೊರಡಿಸಿರುವ ಮಾರ್ಗಸೂಚಿಗಳ ಸುತ್ತೋಲೆಗಳನ್ನು ಪಾಲಿಸಿ ಸಹಕಾರ ಸಂಸ್ಥೆಗಳು ಮೇಲ್ಕಂಡ ವಿಷಯಗಳಿಗೆ ಆಡಳಿತಾತ್ಮಕ ಅನುಮತಿ ಮತ್ತು ಮಂಜೂರಾತಿ ಪಡೆಯತಕ್ಕದ್ದು ಎಂದು ಸೂಚಿಸಿದೆ.

<u>**ಕರ್ನಾಟಕ ಸರ್ಕಾರ**</u>

**(ಸಹಕಾರ ಇಲಾಖೆ)**

<u>**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ:1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52**</u>

ಸಂ: ಡಿಎವೈ : 55 : ಜೆಎಂಸಿ : 2003–04 ದಿನಾಂಕ: 27–4–2004

<u>**ಸು ತ್ತೋ ಲೆ**</u>

ವಿಷಯ: ಕರ್ನಾಟಕ ರಾಜ್ಯದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ನೋಂದಾಯಿಸುವಾಗ ಗಮನದಲ್ಲಿಡಬೇಕಾದ ಅಂಶಗಳು.

ಉಲ್ಲೇಖ:
1) ಈ ಕಛೇರಿಯ ಸುತ್ತೋಲೆ ಸಂ: ಡಿಎವೈ.19.ಜೆಎಂಸಿ.83–84 ದಿ:14–7–1983.
2) ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಪತ್ರದ ಸಂ:ಎಸ್‌ಆರ್.ಸಿಎಸ್.ಉ.ನಿ.6034. ದಿ:20–2–2004
3) ದಿ:28–2–2004 ರಂದು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರ ಸಭೆಯ ನಡವಳಿಗಳು.

******

ಕರ್ನಾಟಕ ರಾಜ್ಯದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ನೋಂದಾಯಿಸುವಾಗ ಗಮನಿಸಬೇಕಾದ ಅಂಶಗಳನ್ನು ನಮೂದಿಸಿ ಉಲ್ಲೇಖ (1) ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿತ್ತು. ಸದರಿ ಸುತ್ತೋಲೆಯ ಅಂಶ (1) ರಲ್ಲಿ ಹೊಸದಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸುವಾಗ ಹಾಲೀ ಇರತಕ್ಕ ಸಂಘಗಳಿಗೂ ಹಾಗೂ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಿರುವ ಸಂಘಗಳಿಗೂ ಪರಸ್ಪರ 2 ಕಿ. ಮೀ. ಅಂತರವಿರಬೇಕು ಹಾಗೂ ಪ್ರತಿದಿನ ಸರಾಸರಿ ಕನಿಷ್ಟ 75 ಲೀಟರ್ ಹಾಲು ಶೇಖರಣೆ ಇದ್ದರೆ ಮಾತ್ರ ಹೊಸದಾಗಿ ಹಾಲು ಉತ್ಪಾದಕರ ಸಂಘಗಳನ್ನು ನೊಂದಾಯಿಸಬೇಕೆಂದು ಸೂಚಿಸಲಾಗಿತ್ತು.

ಈ ಅಂಶವನ್ನು ಸಡಿಲಗೊಳಿಸಲು ಅನೇಕ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಪ್ರಸ್ತಾವೆಗಳು ಸ್ವೀಕೃತವಾಗಿದ್ದು ಈ ವಿಷಯ ದಿ: 28–2–2004 ರಂದು ಎಲ್ಲಾ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳ ವ್ಯವಸ್ಥಾಪಕ

ನಿರ್ದೇಶಕರುಗಳ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಈ ವಿಷಯದಲ್ಲಿ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯೊಂದಿಗೆ ಸಮಾಲೋಚಿಸಲಾಗಿದೆ.

ಮೇಲ್ಕಂಡ ಸುತ್ತೋಲೆಯು ಆಗ ಇದ್ದ ಪರಿಸ್ಥಿತಿಗೆ ಅನುಗುಣವಾಗಿ ಈ ಅಂತರವನ್ನು ನಿಗದಿಪಡಿಸಲಾಗಿತ್ತು. ಆದರೆ ಪ್ರಸ್ತುತ ಸನ್ನಿವೇಶಗಳು ಬದಲಾಗಿದ್ದು, ಪ್ರತಿ ಗ್ರಾಮದಲ್ಲಿ ಹಾಲು ಶೇಖರಣೆ ಉತ್ತಮವಾಗಿದ್ದು ಅಧಿಕ ಸಹಕಾರ ಸಂಘಗಳು ಸಬಲತೆಯಂತೆ ಕೆಲಸ ಮಾಡುತ್ತಿದ್ದು, ಈ ಅಂತರವನ್ನು ಸಡಿಲಗೊಳಿಸುವ ಅವಶ್ಯಕತೆ ಇರುವುದಾಗಿ ಕರ್ನಾಟಕ ಹಾಲು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಎಲ್ಲಾ ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳು

ಒಮ್ಮತದಿಂದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಅಂಶಗಳನ್ನು ಪರಿಗಣಿಸಿ ಹೊಸದಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೊಂದಾಯಿಸಲು ಒಂದು ಸಂಘದಿಂದ ಇನ್ನೊಂದು ಸಂಘಕ್ಕೆ ನಿಗದಿಪಡಿಸಿದ 2 ಕಿ.ಮೀ. ದೂರದ ಅಂತರವನ್ನು ಒಂದು ಕಿ.ಮೀ.ಗೆ ಸಡಿಲಗೊಳಿಸಿ ಹೊಸದಾಗಿ ನೊಂದಾಯಿಸುವ ಸಂಘವು ಕನಿಷ್ಠ ದಿನಂಪ್ರತಿ 250 ಲೀಟರ್ ಹಾಲನ್ನು ಶೇಖರಣೆ ಮಾಡುವ ಸಾಮರ್ಥ್ಯ ಹೊಂದಿದ್ದಲ್ಲಿ ಮಾತ್ರ ಸಂಘವನ್ನು ನೊಂದಾಯಿಸುವುದಾಗಿ ಸೂಚಿಸಲಾಗಿದೆ.

ಸುತ್ತೋಲೆಯ ಉಳಿದ ಅಂಶಗಳು ಮುಂದುವರೆಯುವುದು.

ಸಹಕಾರ ಸಂಘಗಳ ಅಪರ ನಿಬಂಧಕರು,
(ಕೈಗಾರಿಕೆ ಮತ್ತು ಇತರೆ)

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ:1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52**

ಸಂ: ಡಿಎವೈ : 93 : ಜೆಎಂಸಿ : 2003-04 ದಿನಾಂಕ: 29-12-2003

**ಸು ತ್ತೋ ಲೆ**

ವಿಷಯ: ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ, ಇವುಗಳ ಆಡಿಟ್ ವರದಿಗಳ ಬಗ್ಗೆ ಕಲಂ 68 ರಡಿ ಆದೇಶಿಸಿ ಕ್ರಮವಿಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ : ಸಇ 190 ಎಸಸೇ 2003 ದಿ: 24-4-2003

2) ಸರ್ಕಾರದ ಅಧಿಸೂಚನೆ ಸಂಖ್ಯೆ ; ಸಿಎಂಡಬ್ಲ್ಯು.69. ಸಿಎಲ್ಎಂ. 2001 ದಿ: 21-11-2003

******

ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಇಲಾಖೆಯ ಪ್ರಗತಿ ಸಂಘಟನೆಯಿಂದಾಗಿ ಹಿಂದೆ ಇದ್ದ 9 ಪ್ರಾಂತ್ಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು, 4 ಪ್ರಾಂತ್ಯಗಳ ರಚನೆಯಾಗಿರುವುದು ತಮಗೆ ತಿಳಿದ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ, ಈ ಕೆಳಗೆ ತಿಳಿಸಿರುವಂತೆ ನಿಮ್ಮ ವ್ಯಾಪ್ತಿಗೆ ಬರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ಲೆಕ್ಕಪರಿಶೋಧನಾ ವರದಿಯ ಬಗ್ಗೆ ಕಲಂ 68 ರಂತೆ ಕ್ರಮವಹಿಸುವುದು ಅವಶ್ಯವಾಗಿದ್ದು, ಉಲ್ಲೇಖ (2) ರ ಸರ್ಕಾರದ ಅಧಿಸೂಚನೆ ದಿ: 21-11-2001 ರ ಅಧಿಕಾರ ಪ್ರಕಾರ ಪ್ರತ್ಯಾಯೋಜನೆಯ ಲೆಕ್ಕಪರಿಶೋಧನಾ ವರದಿಯನ್ನು ಪುನರ್ವಿಲೋಕನ ಮಾಡಿ ಕಲಂ 68 ರಡಿ ಆದೇಶ ನೀಡಿ ಅವರಂತೆ ಕ್ರಮವಿಡುವ ಅಧಿಕಾರ ನಿಮಗೆ ದತ್ತವಾಗಿರುತ್ತದೆ.

1) ಬೆಂಗಳೂರು ಪ್ರಾಂತ್ಯ ಬೆಂಗಳೂರು ಹಾಲು ಒಕ್ಕೂಟ, ತುಮಕೂರು ಹಾಲು ಒಕ್ಕೂಟ, ಕೋಲಾರ ಹಾಲು ಒಕ್ಕೂಟ, ಶಿವಮೊಗ್ಗ ಹಾಲು ಒಕ್ಕೂಟ

2) ಮೈಸೂರು ಪ್ರಾಂತ್ಯ ಮೈಸೂರು–ಚಾಮರಾಜನಗರ ಹಾಲು ಒಕ್ಕೂಟ,
ಮಂಡ್ಯ ಹಾಲು ಒಕ್ಕೂಟ, ಹಾಸನ ಹಾಲು ಒಕ್ಕೂಟ

3) ಬೆಳಗಾವಿ ಪ್ರಾಂತ್ಯ ಬಿಜಾಪುರ – ಬಾಗಲಕೋಟೆ ಹಾಲು ಒಕ್ಕೂಟ,
ಬೆಳಗಾಂ ಹಾಲು ಒಕ್ಕೂಟ

4) ಗುಲ್ಬರ್ಗಾ ಪ್ರಾಂತ್ಯ ರಾಯಚೂರು – ಬಳ್ಳಾರಿ ಹಾಲು ಒಕ್ಕೂಟ,
ಗುಲ್ಬರ್ಗಾ – ಬೀದರ್ ಹಾಲು ಒಕ್ಕೂಟ

ಮೇಲೆ ತಿಳಿಸಿದಂತೆ ನಿಮ್ಮ ಪ್ರಾಂತ್ಯದ ಅಧೀನಕ್ಕೆ ಒಳಪಡುವ ಜಿಲ್ಲಾ ಹಾಲು ಒಕ್ಕೂಟಗಳ ಲೆಕ್ಕಪರಿಶೋಧನಾ ವರದಿಯನ್ನು ಪಡೆದು ಅವುಗಳ ಪುನರ್‌ವಿಲೋಕನ ಮಾಡಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 68 ರಡಿ ಕ್ರಮವಿಡಲು ಹಾಗೂ ಅದರ ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು ನಿರ್ದೇಶಿಸಲಾಗಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು,
(ಕೈಗಾರಿಕೆ ಮತ್ತು ಇತರೆ)

# <u>ಕರ್ನಾಟಕ ಸರ್ಕಾರ</u>

ಸಂ: ಸಇ 438 ಎಸಸೇ 2002　　　　　　　　ಕರ್ನಾಟಕ ಸರ್ಕಾರದ ಸಚಿವಾಲಯ,

ಬಹುಮಹಡಿಗಳ ಕಟ್ಟಡ,

ಬೆಂಗಳೂರು, ದಿನಾಂಕ: 11-9-2002

<u>ಸು ತ್ತೋ ಲೆ</u>

ವಿಷಯ: ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಇಲಾಖೆ / ಸಂಸ್ಥೆಗಳಲ್ಲಿ ಸಿಬ್ಬಂದಿ ನೇಮಕಾತಿಯಲ್ಲಿ ಮೀಸಲಾತಿ ಪಾಲಿಸುವ ಬಗ್ಗೆ.

ಉಲ್ಲೇಖ:
1) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ 1990.
2) ಸರ್ಕಾರಿ ಆದೇಶ ಸಂ: ಡಿಪಿಎಆರ್ 10 ಎಸ್‌ಬಸಿ 97, ದಿ: 24-6-1998.
3) ಅಧಿಸೂಚನೆ ಸಂಖ್ಯೆ : ಡಿಪಿಎಆರ್ 13 ಎಸ್‌ಬಿಸಿ 2001, ದಿ: 21-11-2001
4) ಸರ್ಕಾರದ ಪತ್ರ ಸಂಖ್ಯೆ : ಸಿಎಂಡಬ್ಲ್ಯು 62 ಸಿಎಲ್‌ಎಂ 2000 ದಿ:18-2-2002

******

ಕರ್ನಾಟಕ ರಾಜ್ಯಪತ್ರದ ದಿ:7-3-1991 ರ ವಿಶೇಷ ಸಂಚಿಕೆಯಲ್ಲಿ ಪ್ರಕಟಗೊಂಡಿರುವ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 ರ ಪ್ರಕಾರ ಕರ್ನಾಟಕ ರಾಜ್ಯದ ಸಿವಿಲ್ ಸೇವೆಯಲ್ಲಿನ ಯಾವುದೇ ಹುದ್ದೆಗೆ ಅಥವಾ ಕರ್ನಾಟಕ ರಾಜ್ಯದಡಿಯ ಸಿವಿಲ್ ಹುದ್ದೆಗೆ ನೇಮಕಾತಿಗಳನ್ನು ಮಾಡುವಾಗ, ನೇಮಕಾತಿಗಳು ಅಥವಾ ಹುದ್ದೆಗಳನ್ನು ಭಾರತದ ಸಂವಿಧಾನದ 16 ನೇ

ಅನುಚ್ಛೇದದ (4) ನೇ ಖಂಡದ ಅಡಿಯಲ್ಲಿ ಸರ್ಕಾರದಿಂದ ಮಾಡಲಾದ ಆದೇಶಗಳಲ್ಲಿ ಆಗಿಂದಾಗ್ಗೆ ನಿರ್ದಿಷ್ಟಪಡಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಮಾಣದಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಸದಸ್ಯರಿಗೆ ಮೀಸಲಿಡಬೇಕಾಗಿದೆ. ಈ ಅಧಿನಿಯಮದ ವ್ಯಾಪ್ತಿಗೆ ಬರುವ ಇಲಾಖೆಗಳು / ಸಂಸ್ಥೆಗಳು ಹಾಗೂ ಹುದ್ದೆಗಳನ್ನು ಮೀಸಲಿಡಬೇಕಾದ ವೃಂದಗಳನ್ನು ಸದರಿ ಅಧಿನಿಯಮದಲ್ಲಿ ವ್ಯಾಖ್ಯಾನಿಸಿದೆ. ಅದರಂತೆ ಸಹಕಾರ ಸಚಿವಾಲಯದ ಆಡಳಿತ ನಿಯಂತ್ರಣಕ್ಕೆ ಒಳಪಡುವ ಸಹಕಾರ ಇಲಾಖೆ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಕೃಷಿ ಮಾರಾಟ ಇಲಾಖೆ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಮತ್ತು ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959 ರ ಅಡಿಯಲ್ಲಿ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆ ಎಂದು ಭಾವಿಸಲಾದ ಸಹಕಾರಿ ಸಂಘಗಳು ಈ ಅಧಿನಿಯಮವನ್ನು ಪಾಲಿಸಬೇಕಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಡಿಪಿಎಆರ್ 10 ಎಸ್‌ಬಿಸಿ 97, ದಿ: 24-6-1998 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮುಂಬಡ್ತಿಯಲ್ಲಿ ಗುರುತಿಸಲಾದ ಹುದ್ದೆಗಳನ್ನು ತುಂಬುವ ಬಗ್ಗೆ ನಿರ್ದೇಶನಗಳನ್ನು ನೀಡಿದೆ.

ಅಧಿಸೂಚನೆ ಸಂ: ಡಿಪಿಎಆರ್ 13 ಎಸ್‌ಬಿಸಿ 2001, ದಿ:21-11-2001 ರಲ್ಲಿ ಪ್ರಕಟಿಸಿರುವ ಕರ್ನಾಟಕ ರಾಜ್ಯ ನಾಗರೀಕ ಸೇವಾ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿಟ್ಟ ತುಂಬದೇ ಉಳಿದ ಖಾಲಿ ಹುದ್ದೆಗಳು) (ವಿಶೇಷ ನೇಮಕಾತಿ) ನಿಯಮಗಳ, 2001, ರಲ್ಲಿ ನೇರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಿಟ್ಟ ಹುದ್ದೆಗಳನ್ನು ನೇಮಕಾತಿ ಪ್ರಾಧಿಕಾರದಲ್ಲಿ ಬಿಡುಗಡೆ ಮಾಡಲು ಹಾಗೂ ನೇಮಕಾತಿ ಮಾಡಿಕೊಳ್ಳಲು ನಿರ್ದೇಶನವನ್ನು ನೀಡಿದೆ.

ಮೇಲಿನ ಅಧಿನಿಯಮ / ಆದೇಶ / ನಿಯಮಗಳು ಹಾಗೂ ಸಂಬಂಧಿತ ಮಾರ್ಗಸೂಚಿಗಳನ್ನು ಸಹಕಾರ ಸಚಿವಾಲಯದ ಆಡಳಿತ ನಿಯಂತ್ರಣಕ್ಕೆ ಒಳಪಡುವ ಎಲ್ಲಾ ಕ್ಷೇತ್ರ ಇಲಾಖೆಗಳು ಹಾಗೂ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ರಡಿ ನೋಂದಾಯಿತವಾಗಿರುವ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ ಎಲ್ಲಾ ಸಹಕಾರಿ ಸಂಘಗಳು ಚಾಚೂ ತಪ್ಪದೇ ಪಾಲಿಸತಕ್ಕದ್ದು.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ರಡಿ ನೋಂದಾಯಿತವಾಗಿರುವ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ ಕೆಲವೊಂದು ಸಹಕಾರಿ ಸಂಘಗಳು ಮೇಲಿನ ಅಧಿನಿಯಮ /

ಆದೇಶ / ನಿಯಮಗಳು ಹಾಗೂ ಸಂಬಂಧಿತ ಮಾರ್ಗಸೂಚಿಗಳನ್ನು ಪಾಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

**ಆದ್ದರಿಂದ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ :–**

1. ಸರ್ಕಾರದ ಪೂರ್ವಾನುಮೋದನೆ ಇಲ್ಲದೇ ಯಾವುದೇ ಹೊಸ ನೇರ ನೇಮಕಾತಿಗಳನ್ನು ಮಾಡತಕ್ಕದ್ದಲ್ಲ. ಯಾವುದೇ ನೇರ ನೇಮಕಾತಿಯನ್ನು ಮಾಡಿದಲ್ಲಿ ಸಂಬಂಧಿಸಿದ ಆಡಳಿತ ಮಂಡಳಿ, ಸಹಕಾರ ಸಂಘಗಳ ಜಂಟಿ ನಿಬಂಧಕರು ಮತ್ತು ಸಹಕಾರ ಸಂಘಗಳ ಉಪನಿಬಂಧಕರು ವೈಯುಕ್ತಿಕ ಜವಾಬ್ದಾರರಾಗುತ್ತಾರೆ.
2. ನೇಮಕಾತಿಯು ಅತ್ಯಾವಶ್ಯಕವಾಗಿರುವಂತಹ ಪ್ರಸ್ತಾವನೆಗಳಿಗೆ ಪೂರ್ಣ ಸಮರ್ಥನೆ ನೀಡತಕ್ಕದ್ದು. ಅವಶ್ಯವಿರುವ ಸಾಮಾನ್ಯ ವರ್ಗ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳ ಸಂಖ್ಯೆಯನ್ನು, ಪ್ರತಿ ವೃಂದದ ಖಾಲಿ ಹುದ್ದೆಗಳ ವರ್ಗೀಕರಣವನ್ನು ತೋರಿಸತಕ್ಕದ್ದು. ತಪ್ಪಿದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಹಿಂದಿರುಗಿಸಲಾಗುವುದು.
3. ಸರ್ಕಾರವು ಶೇ. 51 ಕ್ಕಿಂತ ಹೆಚ್ಚಿನ ಷೇರು ಬಂಡವಾಳವನ್ನು ಒಳಗೊಂಡಿರುವ ಸಹಕಾರ ಸಂಸ್ಥೆಗಳಲ್ಲಿ ನೇಮಕಾತಿಯ ಸಂಪೂರ್ಣ ಪ್ರಕ್ರಿಯೆಯು ಬದ್ಧತೆ (accountability) ಮತ್ತು ಪಾರದರ್ಶಕತೆ (transparency) ಯನ್ನು ಹೊಂದಿರತಕ್ಕದ್ದು.
4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಯನ್ನು ಶೇ. 51 ಕ್ಕಿಂತ ಹೆಚ್ಚಿನ ಷೇರು ಬಂಡವಾಳವನ್ನು ಸರ್ಕಾರ ಹೊಂದಿರುವಂತಹ ಅಥವಾ ಸರ್ಕಾರವು ಹಣಕಾಸಿನ ನಿಯಂತ್ರಣವನ್ನು ಹೊಂದಿರುವಂತಹ ಸಹಕಾರ ಸಂಸ್ಥೆಗಳಲ್ಲಿ ಜಾರಿಗೊಳಿಸತಕ್ಕದ್ದು.
5. ಸಹಕಾರ ಸಂಸ್ಥೆಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ ನೋಂದಾಯಿತವಾಗಿರುವುದರಿಂದಲೂ, ಸಹಕಾರಿ ಸಹಕಾರ ಸಂಸ್ಥೆಗಳಿಗೆ ಸಾಲ ಪಡೆಯಲು ಸರ್ಕಾರವು ಖಾತರಿ ನೀಡುವುದರಿಂದಲೂ ಹಾಗೂ ಸಹಕಾರ ಇಲಾಖೆ ಅಧಿಕಾರಿಗಳನ್ನು ಈ ಸಂಸ್ಥೆಗಳಿಗೆ ನೇಮಿಸಲಾಗುವುದರಿಂದಲೂ ಹಾಗೂ ಸರ್ಕಾರವು ಆಡಳಿತ ಮಂಡಳಿಯಲ್ಲಿ ಪರಿಣಾಮಕಾರಿ ನಿಯಂತ್ರಣ ಹೊಂದಿರುವ ಸಹಕಾರ ಸಂಸ್ಥೆಗಳಲ್ಲಿ ಸರ್ಕಾರದ ಷೇರು ಬಂಡವಾಳವು ಶೇ.51 ಕ್ಕಿಂತ ಕಡಿಮೆ ಇರುವಂತಹ ಸಂದರ್ಭದಲ್ಲಿಯೂ ಸಹ ಅವುಗಳನ್ನು ಕಂಪನಿ ಕಾಯ್ದೆಯಡಿ ನೋಂದಾಯಿತವಾಗಿರುವ ಸಂಸ್ಥೆಗಳೊಂದಿಗೆ ಹೋಲಿಸಲಾಗುವುದಿಲ್ಲ. ಆದುದರಿಂದ

ಸರ್ಕಾರದ ಪತ್ರ ಸಂ: ಸಿಎಂಡಬ್ಲ್ಯು / 62 ಸಿಇಎಂ 2000 ದಿ: 18–2–2002 ರಲ್ಲಿ ತಿಳಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ರಡಿ ನೋಂದಾಯಿತವಾಗಿರುವ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ ಎಲ್ಲಾ ಸಹಕಾರ ಸಂಘಗಳು ಮೀಸಲಾತಿ ಕುರಿತು ಕಾಲಕಾಲಕ್ಕೆ ಹೊರಡಿಸಿರುವ ಸರ್ಕಾರದ ಆದೇಶ / ಸುತ್ತೋಲೆ / ಸೂಚನೆಗಳಿಗೆ ಬದ್ಧವಾಗಿರತಕ್ಕದ್ದು.

ಸಹಿ,

(ಬಿ.ಎಸ್. ಜಾಪಾಲಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಸಹಕಾರ ಇಲಾಖೆ.

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ:1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52**

ಸಂ: ಡಿಎವೈ : 121: ಜೆಎಂಸಿ : 93–94 ದಿನಾಂಕ: 19–08–1993

**ಸು ತ್ತೋ ಲೆ ಸಂ ಖ್ಯೆ – 4**

ವಿಷಯ: ಹಾಲು ಉತ್ಪಾದಕರ ಸಹಕಾರ ಸಂಘಗಳು ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ಉಪನಿಯಮಗಳ ತಿದ್ದುಪಡಿ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂ: ಡಿಎವೈ.99.ಜೆಎಂಸಿ.84–85 ದಿ: 15–1–86 ಮತ್ತು 25–4–86.

******

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿಯ ಹಾಗೂ ಎನ್.ಡಿ.ಡಿ.ಬಿ.ಯ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳ ಮತ್ತು ಒಕ್ಕೂಟದ ಉಪನಿಯಮಗಳ ತಿದ್ದುಪಡಿಯನ್ನು ಅನುಮೋದಿಸಿ ನೋಂದಣಿ ಮಾಡುವ ಮುನ್ನ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿ, ಬೆಂಗಳೂರು ಇವರ ಸಲಹೆ ಪಡೆಯುವಂತೆ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಉಪನಿಬಂಧಕರು ಮತ್ತು ಸಂಯುಕ್ತ ನಿಬಂಧಕರುಗಳಿಗೆ ಈ ಕಛೇರಿಯ ಸುತ್ತೋಲೆ ಸಂ: ಡಿಎವೈ : 28 : 82–83, ದಿನಾಂಕ: 7–10–1982 ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿತ್ತು. ಆದರೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಉಪನಿಯಮಗಳ ತಿದ್ದುಪಡಿಯನ್ನು ಕೆಲವು ಸಹಾಯಕ ನಿಬಂಧಕರು ಮತ್ತು ಸಂಯುಕ್ತ ನಿಬಂಧಕರು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿಯ ಸಲಹೆ ಪಡೆಯದೆ ಮತ್ತು ಹಾಲು ಉತ್ಪಾದಕರ ಮಹಾ ಮಂಡಳಿಗೆ ತಿಳಿಸದೆ ಅನುಮೋದಿಸಿ ನೋಂದಣಿ ಮಾಡುತ್ತಿರುವುದು ಸಹಕಾರ ಸಂಘಗಳ ನಿಬಂಧಕರ ಗಮನಕ್ಕೆ ಬಂದಿರುತ್ತದೆ. ಈ ರೀತಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ, ಬೆಂಗಳೂರು ಇವರ ಸಲಹೆಯನ್ನು ಪಡೆಯದೆ ನೋಂದಣಿ ಮಾಡುವುದರಿಂದ ಕೆಲವು ವೇಳೆ ಮಾದರಿ ಉಪನಿಯಮಗಳಲ್ಲಿರುವ ನಿಯಮಗಳಿಗೆ ವ್ಯತ್ಯಾಸ ಉಂಟಾಗುತ್ತದೆ. ರಾಜ್ಯಾದ್ಯಂತ ಏಕರೂಪ ನಿಯಮಗಳಿರಬೇಕೆಂದು ನಿರ್ಧರಿಸಿ

ಮಾದರಿ ಉಪನಿಯಮಗಳನ್ನು ರಚಿಸಲಾಗಿತ್ತು.  ಆದುದರಿಂದ ಈ ಕೆಳಗೆ ಸೂಚಿಸಿದಂತೆ ಸ್ಪಷ್ಟೀಕರಣ ನೀಡಲಾಗಿದೆ.

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯ ಹಾಗೂ ಎನ್‌ಡಿಡಿಬಿ ಯ ಸದುದ್ದೇಶಗಳನ್ನು ಈಡೇರಿಸುವ ಸಲುವಾಗಿ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಉಪನಿಯಮಗಳ ತಿದ್ದುಪಡಿಯ ಪ್ರಸ್ತಾವಗಳನ್ನು ಸಂಬಂಧಪಟ್ಟ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳ ಮುಖಾಂತರ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಉಪನಿಯಮಗಳ ತಿದ್ದುಪಡಿ ಪ್ರಸ್ತಾವಗಳನ್ನು ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು ಇವರ ಮುಖಾಂತರ ಬಂದಲ್ಲಿ ಮಾತ್ರ ಸಂಬಂಧಿಸಿದ ಇಲಾಖಾಧಿಕಾರಿಗಳು ನೋಂದಣಿ ಮಾಡುವುದನ್ನು ಪರಿಶೀಲಿಸಲು ಸೂಚಿಸಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು,

(ಬಳಕೆ ಮತ್ತು ಮಾರಾಟ)

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ:1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52**

ಸಂ: ಡಿಎವೈ : 19 : ಜೆಎಂಸಿ : 82–83 ದಿನಾಂಕ: 14–7–1983

**ಸು ತ್ತೋ ಲೆ**

ವಿಷಯ: ಕರ್ನಾಟಕ ರಾಜ್ಯದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ನೋಂದಾಯಿಸುವಾಗ ಗಮನದಲ್ಲಿಡಬೇಕಾದ ಅಂಶಗಳು.

ಉಲ್ಲೇಖ: 1) ದಿ:30–3–83 ರಂದು ಏರ್ಪಡಿಸಿದ್ದ ರಾಜ್ಯಮಟ್ಟದ ಹಾಲು ಉತ್ಪಾದಕರ ಸಂಘಗಳ ವಿಚಾರಗೋಷ್ಠಿಯ ತೀರ್ಮಾನಗಳು.

2) ಕರ್ನಾಟಕ ರಾಜ್ಯ ಸಹಕಾರ ಯೂನಿಯನ್ ಪತ್ರದ ಸಂ: ಸಶಿ 157 / 83–84 ದಿ: 27–6–83.

******

ಕರ್ನಾಟಕ ರಾಜ್ಯ ಸಹಕಾರ ಯೂನಿಯನ್ ಲಿಮಿಟೆಡ್, ಬೆಂಗಳೂರು ಇವರು ಕರ್ನಾಟಕ ರಾಜ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಕುಂದುಕೊರತೆಗಳ ನಿವಾರಣೆಗಾಗಿ ವಿಚಾರಗೋಷ್ಠಿಯನ್ನು ಏರ್ಪಡಿಸಿದ್ದರು. ಅದರಲ್ಲಿ ಕೆಲವು ನಿರ್ಣಯಗಳನ್ನು ಜಾರಿಗೆ ತರಲು ಕೋರಿದ್ದಾರೆ. ಅದ್ದರಿಂದ ರಾಜ್ಯದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಾಯಿಸುವಾಗ ಈ ಕೆಳಗೆ ಕಂಡ ಅಂಶಗಳನ್ನು ಪರಿಗಣಿಸಬೇಕೆಂದು ಕೋರುತ್ತೇನೆ.

1. ಹೊಸದಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸುವಾಗ ಹಾಲಿ ಇರತಕ್ಕ ಸಂಘಗಳಿಗೂ ಅದಕ್ಕೂ ಪರಸ್ಪರ 2 ಕಿ.ಮೀ. ಅಂತರ ಇರಬೇಕು. ಹಾಗೂ ಪ್ರತಿದಿನ ಸರಾಸರಿ ಕನಿಷ್ಠ 75 ಲೀಟರ್ ಹಾಲು ಶೇಖರಣೆಗೆ ಅವಕಾಶವಿದ್ದರೆ ಮಾತ್ರ ಹೊಸದಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಾಯಿಸಬೇಕು.
2. ಹಾಲು ಉತ್ಪಾದನೆಯು ಗ್ರಾಮೀಣ ಜನತೆಗೆ ಉಪಸಂಪಾದನೆಯ ಉದ್ಯಮವಾಗಿ ಬಡತನವನ್ನು ನಿವಾರಿಸಲು ಉತ್ತಮ ಸಾಧನೆ ಆಗಿರುವುದರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸ್ಥಾಪಿಸಲು ಅಗತ್ಯ ಕ್ರಮಕೈಗೊಳ್ಳತಕ್ಕದ್ದು.

3. ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೋಂದಾಯಿಸುವಾಗ ಆರ್ಥಿಕ ಹಿನ್ನೆಲೆ, ತಾಂತ್ರಿಕತೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಸಂಘಗಳನ್ನು ನೋಂದಾಯಿಸಬೇಕು.

ಸಹಕಾರ ಸಂಘಗಳ ಅಪರ ನಿಬಂಧಕರು,
(ಬಳಕೆ ಮತ್ತು ಮಾರಾಟ)